# ನಿನ್ನನಾಶ್ರಯಿಸುವೆ ನಿಗಮಗೋಚರ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 96.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 259.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 247.
4. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 337.
5. **Note:** Lyrics given here are as per Ref. 1. The wordings in Ref. 2, Ref. 3 and Ref. 4 are same as in Ref. 1 with few minor differences, which are not considered here.
6. **Note:** Singer has followed (with few errors) these lyrics.

ರಾಗ: ಕಲ್ಯಾಣಿ ತಾಳ: ಝಂಪೆ

ನಿನ್ನನಾಶ್ರಯಿಸುವೆ ನಿಗಮಗೋಚರ ನಿತ್ಯ
ಬೆನ್ನ ಬಿಡದೇ ಕಾಯೊ ಮನದಿಷ್ಟವೀಯೋ ॥ ಪ ॥

ಕುಂದಣದ ಆಶ್ರಯ ನವರತ್ನಗಳಿಗೆಲ್ಲ
ಚಂದಿರನ ಆಶ್ರಯ ಚಕೋರಗೆ
ಕಂದರ್ಪನಾಶ್ರಯ ವಸಂತ ಕಾಲಕ್ಕೆ ಗೋ-
ವಿಂದ ನಿನ್ನಾಶ್ರಯವು ಮರಣಕಾಲದೊಳು ॥ ೧ ॥

ಹಣ್ಣುಳ್ಳ ಮರಗಳು ಪಕ್ಷಿಗಳಾಶ್ರಯವು
ಪುಣ್ಯ ನದಿಗಳು ಋಷಿಗಳಾಶ್ರಯವು
ಕಣ್ಣಿಲ್ಲದಾತನಿಗೆ ಕೈಗೋಲಿನಾಶ್ರಯವು
ಎನ್ನಿಷ್ಟ ಪಡೆಯುವರೆ ನಿನ್ನ ಆಶ್ರಯವು ॥ ೨ ॥

ಪತಿವ್ರತಾ ವನಿತೆಗೆ ಪತಿಯೊಂದೆ ಆಶ್ರಯವು
ಯತಿಗಳಿಗನುಶ್ರುತದಿ ಪ್ರಾಣವದಾಶ್ರಯವು
ಮತಿವಂತನಿಗೆ ಹರಿ ಸ್ತುತಿಗಳೇ ಆಶ್ರಯವು
ಹಿತವಹುದು ಪುರಂದರ ವಿಠಲನಾಶ್ರಯವು ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ನಿಗಮಗೋಚರ** = ಜ್ಞಾನದ ಕಣ್ಣಿಗೆ ಕಾಣುವವನು, ವೇದಗಮ್ಯ, ಜ್ಞಾನಗಮ್ಯ, ವೇದಗಳಿಗೆ ಕಾಣಿಸುವವ, ಪರಮಾತ್ಮ

**ಕುಂದಣ** – ಬಂಗಾರದ ಚೌಕಟ್ಟು.

**ಕಂದರ್ಪ**– ಮನ್ಮಥ.

**ಎನ್ನಿಷ್ಟ ಪಡೆವರೆ** – ಮನದಿಷ್ಟಾರ್ಥವನ್ನು ಪಡೆದುಕೊಳ್ಳಬೇಕೆಂದರೆ,

**ಪ್ರಣವ** – ಓಂಕಾರ ಮಂತ್ರ.

**ಅನುಶ್ರುತ ಪ್ರಣವ** – ಆಶ್ರಮ ಸ್ವೀಕರಿಸುವಾಗ ವಿರಜಾ ಹೋಮವಾದ ಮೇಲೆ ಗುರುವಿನಿಂದ ದೊರಕುವ ಓಂಕಾರ ಮಂತ್ರ.

**ಚಕೋರ** = ರಾತ್ರಿ ಬಾಳುವ ಹಕ್ಕಿ; ಬೆಳದಿಂಗಳು ಇದರ ಆಹಾರ

**Classification:** Keerthane
**Ankita:** purandara vittala
**Location:** NA
**Category:** Pooja Tatva, Jeevana Sambodhane
**Sub-Category:** paramatma, mana, abharana, Chandra, pakshi, govinda, hannu, marana, mara, punya, nadi, muni, kannu, kai, patni, hengasu, pati, om, nara, Krishna,
**Pravachana:** NA
**Explanation:** NA